ಸರಕಾರಕ್ಕೆ ಹಾಗೂ ಸಾರ್ವಜನಿಕರಿಗೆ ಭಾರಿ ಪ್ರಮಾಣದಲ್ಲಿ ಮಾಡಿರುವ ಮೋಸ, ವಂಚನೆಗಳು ಸರ್ಕಾರದವರ ಗಮನಕ್ಕೆ ಅರ್ಜಿಗಳ ಮೂಲಕ ಹಾಗೂ ಪತ್ರಿಕೆಗಳ ಮೂಲಕ ಬಂದಿದ್ದಾಗ್ಯೂ ಸರಕಾರ ಅಥವಾ ಸಬಂಧಪಟ್ಟ ಮಂತ್ರಿಗಳು ಯಾವ ಕ್ರಮವನ್ನೂ ತೆಗೆದು ಕೊಂಡಿರುವುದಿಲ್ಲ. ಉದಾಹರಣೆಗಾಗಿ.—ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಖಿಟ್ಟಿಕೊಪ್ಪ ಗ್ರಾಮದ ಕೋಣಂದೂರು ವೃತ್ತಕ್ಕೆ ಸೇರಿದ ಕೆ.ಸಿ.ಕೃಷ್ಣಪ್ಪ ಹೆಗಡೆ-ಗ್ರಾಮಲಿಕ್ಕಿಗ ಮತ್ತು ಶಿವಮೊಗ್ಗ ಜಿಲ್ಲಾ ಹೊಸನಗರ ತಾಲ್ಲೂಕು ಕರೆಹಳ್ಳಿ ಹೋಬಳಿ ನೆವಟೂರು ಗ್ರಾಮ ಲೆಕ್ಕಿಗ ಇವರುಗಳು ದಾಖಲೆ ತಿದ್ದಿ ಪಂಚನೆ ಮಾಡಿರುವರು. ಅಲ್ಲದೆ ಸೊರಬ ತಾಲ್ಲೂಕಿನ ಅನೇಕ ಭಾರಿ ಭೂಮೂಲೀಕರು ಅಧಿಕಾರಿಗಳಿಂದ ದಾಖಲೆ ತಿದ್ದಿಸಿ ೪,೮೦೦ ರೂ.ಗಳಿಗಿಂತ ಕಡಿಮೆ ಆದಾಯ ತೋರಿಸಿ ಭೂಮಿಯ ಪರಿಹಾರವನ್ನು ಪಡೆದಿರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮತ್ತು ಸಂಸದೀಯವ್ಯವಹಾರಗಳ ಮಂತ್ರಿಯವ ಮಾನ್ಯ ಅಧ್ಯಕ್ಷರೆ, ಅವರ ಹತ್ತಿರ ದಾಖಲೆ ಇದೆ ಎಂದು ಹೇಳುತ್ತಾರೆ. ಅದನ್ನು ಅವರು ಕಳುಹಿಸಿಕೊಡಲಿ. ಯಾರು ತಪ್ಪು ಮಾಡಿದ್ದಾರೆ ಎಂದು ಆಪಾದನೆ ಮಾಡಿದ್ದಾರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಮೈಸೂರಿನ ಶ್ರೀಮತಿ ವಿಜಯಲಕ್ಷ್ಮಿ ಎಂಬ ವಿವಾಹಿತ ಹೆಣ್ಣು ಮಗಳನ್ನು ಬೆಂಕಿಗೆ ಆಹುತಿ ಮಾಡಿರುವ ಬಗ್ಗೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ, ನಿನ್ನೆ ನಿಯಮ ೩೫ರ ಪ್ರಕಾರ ನೋಟೀಸ್ ಕೊಟ್ಟಿದ್ದೆ. ಶಿಕ್ಷಣ ಸಚಿವರು ಉತ್ತರ ಕೊಡುತ್ತೇವೆಂದು ಹೇಳಿದ್ದರು. ಆದರೆ ನನ್ನ ಉತ್ತರ ಡೆಲ್ಲಿಗೆ ಹೋಗಿದೆ. ಏನು ಮಾಡುವುದು?

ಶ್ರೀ ಬಿ. ರಾಚಯ್ಯ.—ನಾನು ಯಡಿಯೂರಪ್ಪನವರು ಎತ್ತಿದ ವಿಚಾರಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಭೂಪತಿಯವರೇ ಉತ್ತರ ಓದುತ್ತಿದ್ದಾರೆ, ಸ್ವಲ್ಪ ತಾಳಿ.

ಶ್ರೀ ವಸಂತ ಬಂಗೇರಾ.—ಅದು ಯಡಿಯೂರಪ್ಪನವರು ಹಾಕಿದ್ದಲ್ಲ. ನಾನು ಹಾಕಿದ ಪಶ್ನೆ ಅದು.

ಶ್ರೀ ಬಿ. ರಾಚಯ್ಯ.—ಶಿಕಾರಿಪುರದ್ದಲ್ಲ. ಇದು ಬೇರೆ.

ಅಧ್ಯಕ್ಷರು.—ಭೂಪತಿಯವರು ಅವರ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತಾರೆ.

ಶ್ರೀ ಯು. ಭೂಪತಿ.—ಕೃಷ್ಣನ್ ಅವರ ಪರವಾಗಿ ಕೊಟ್ಟಿದ್ದು ಒಂದಿದೆ. ನನ್ನದೊಂದಿದೆ. ಯಾವುದನ್ನು ಪ್ರಸ್ತಾಪ ಮಾಡಬೇಕೆಂಬುದು ಗೊತ್ತಿಲ್ಲ.

ಅಧ್ಯಕ್ಷರು.—ನಿಮ್ಮದು ಓದಿ. ಮೈಸೂರಿನ ವಿಜಯಲಕ್ಷ್ಮಿ ಎಂಬುವರ ವಿಚಾರ ಹೇಳಿ.

ಶ್ರೀ ಯು. ಭೂಪತಿ.—ಆಯಿತು. ಹೇಳುತ್ತೇನೆ. ಮೈಸೂರಿನ ವಿಜಯಲಕ್ಷ್ಮಿ ಎಂಬ ವಿವಾಹಿತ ಯುವತಿ ದಿನಾಂಕ ೩೦-೮-೮೫ ರಂದು ೧೨-೩೦ ಗಂಟೆಗೆ ಗಂಡನ ಮನೆಯಲ್ಲಿ ದೌರ್ಜನ್ಯಕ್ಕೆ ಬಲಿಯಾಗಿ ಬೆಂಕಿಗೆ ಆಹುತಿಯಾಗಿ ಆಸ್ಪತ್ರೆ ಸೇರಿದ್ದಾಳೆ. ಆಕೆಯ ಗಂಡ, ಅತ್ತೆ, ಇಬ್ಬರೂ ಸೇರಿ ಕಿರುಕುಳ ಕೊಟ್ಟು ಹೊಡೆದು ಬಡಿದು ಒಂದೇ ವರ್ಷದಲ್ಲಿ ಮೂರು ಬಾರಿ ತವರು ಮನೆಗೆ ಓಡಿಸಿ ೭೦೦೦ ರೂ. ಹಣವನ್ನು ವರದಕ್ಷಿಣೆ ಪಡೆದಿದ್ದಾರೆ. ಈಗ ೧೪ಳಿ-ಜಾಕಿ ಕ್ವಾರ್ಟರ್ಸ್, ಮೈಸೂರಿನಲ್ಲಿ ವಾಸ ಮಾಡುತ್ತಿದ್ದು ನಾರಾಯಣ ಸ್ವಾಮಿ ಎನ್ನುವ ಗಂಡ ಮತ್ತು ತಾಯಮ್ಮ ಎನ್ನುವ ಅತ್ತೆ ಅವರೊಂದಿಗೆ ಇದ್ದಳು. ಈಗ ನಾವು ಬದುಕಿನ ಮಧ್ಯೆ ತೂಗುಯ್ಯಾಲೆಯಾಡುತ್ತಿರುವ ವಿಜಯಲಕ್ಷ್ಮಿ ಮದುವೆಯ ಮೊದಲಲ್ಲಿ ೨ ೦೦೦ ರೂ. ನಂತರ ಹಂತಹಂತವಾಗಿ ಕಂತಿನ ರೂಪದಲ್ಲಿ ಒಟ್ಟು ೭,೦೦೦ ರೂಪಾಯಿಗಳನ್ನು ಗಂಡನಿಗೆ ತವರು ಮನೆಯಿಂದ ಹಿಂಸೆ ತಾಳಲಾರದೆ ತಂದುಕೊಟ್ಟಿದ್ದಾಳೆ. ಇನ್ನು ಏನೂ ಕೊಡಲಾಗದ

ಆಸಹಾಯಕ ಪರಿಸ್ಥಿತಿಯಲ್ಲಿದ್ದಾಗ ವಿಜಯಲಕ್ಷ್ಮಿಯನ್ನು ಬೆಂಕಿ ಬಾಯಿಗೆ ತಳ್ಳಿದ್ದಾರೆ. ಮೈಸೂರಿನ ಕೆ. ಆರ್. ಆಸ್ಪತ್ರೆಯಲ್ಲಿ ದಾಖಲಾಗಿರುವ ಈಕೆಯ ದುರಂತದ ಕರುಳು ಕತ್ತರಿಸುವ ಪ್ರಕರಣವನ್ನು ಈಕೆಯ ಅಣ್ಣ ರಾಮಚಂದ್ರ ನಜರಾಬಾದ್ ಪೋಲೀಸ್ ಠಾಣೆಗೆ ದೂರು ನೀಡಿ ತಿಳಿಸಿದ್ದರೂ ಪೋಲೀಸರು ಯಾವ ಕ್ರಮವನ್ನೂ ಕೈಕೊಂಡಿಲ್ಲ. ಕೇವಲ ಆತ್ಮಹತ್ಯೆ ಎಂದು ಈ ಪ್ರಕರಣ ಮುಚ್ಚುವ ಪಿತೂರಿ ನಡೆದಿದೆ. ಪಂಚಿಲಿಯರ ಆರ್ಥಿಕ, ಸಾಮಾಜಿಕ ಸಮಾನತೆಯನ್ನು ತರುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿ ಆರಿಸಿ ಬಂದ ರಾಮಕೃಷ್ಣ ಹೆಗ್ಗಡೆ ಅವರ ಸರಕಾರಕ್ಕೆ ಇಂಥ ಸೋದರಿಯರನ್ನು ಬಲಿ ತೆಗೆದುಕೊಳ್ಳುವ ವರದಕ್ಷಿಣೆ ಪಿಡುಗನ್ನು ನಿವಾರಿಸಲು ಸಾಧ್ಯವಿಲ್ಲವೆ? ಈ ಘಟನೆಯಲ್ಲಿ ಸರಕಾರ ಏನು ಕ್ರಮ ಕೈಕೊಂಡಿದೆ?

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಮಂತ್ರಿಗಳು).— ಎಲ್ಲಕ್ಕೂ ರಾಜಕೀಯ ತರುವುದು ಬೇಡ. ಇವತ್ತು ಬೆಳಿಗ್ಗೆ ವಿಷಯ ತಿಳಿಸಿದ್ದಾರೆ. ನಾನು ಈ ಬಗ್ಗೆ ವರದಿ ತರಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಸತ್ಯಾಂಶವುಳ್ಳ ವರದಿ ಹೇಳಬೇಕೇ ಹೊರತು ಬಣ್ಣ ಕಟ್ಟಿ ನಾನಾಗಲೀ ಅವರಾಗಲೀ ಹೇಳುವುದು ಬೇಡ. ಹೆಣ್ಣನ್ನು ಪ್ರಚಾರ ವಸ್ತುವಾಗಿ ಉಪಯೋಗಿಸುವುದು ಬೇಡ.

ಶ್ರೀ ಯು.ಭೂಪತಿ.—ನಾನು ಇರುವ ವಿಷಯ ಹೇಳಿದ್ದೇನೆ. ಬಣ್ಣ ಕಟ್ಟಿಲ್ಲ.

ಶ್ರೀ ಬಿ. ರಾಚಯ್ಯ.—ಹೆಗಡೆಯವರ ಸರ್ಕಾರ ಎಂದು ಏತಕ್ಕೆ ಹೇಳಬೇಕು?

ಶ್ರೀ ಯು. ಭೂಪತಿ.—ಹೆಗಡೆ ಸರ್ಕಾರ ಎಂದು ಹೇಳದೆ ಗುಂಡೂರಾಯರ ಸರ್ಕಾರ ಎಂದು ಹೇಳಲೆ?

ಶ್ರೀ ಬಿ. ರಾಚಯ್ಯ.—ಹೊಸದಾಗಿ ತಾವು ಬಂದಿದ್ದೀರಿ. ರಾಜಕೀಯ ಮಾಡುವುದಕ್ಕೆ. ಹೋಗಬೇಡಿ. ಮಾನ್ಯ ಯಡಿಯೂರಪ್ಪನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದರು, ಅದಕ್ಕೆ ಈಗ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.— ಹೇಳಿ.

(vii) ರಾಜ್ಯದಲ್ಲಿರುವ ೫ ಹತ್ತಿ ಗಿರಣಿಗಳು ಮುಚ್ಚಿರುವುದರಿಂದ ಕಾರ್ಮಿಕರಿಗೆ ತೊಂದರೆಯುಂಟಾಗಿರುವ ಬಗ್ಗೆ

ಶ್ರೀ ಪಂಪಾಪತಿ.—ಅಧ್ಯಕ್ಷರೆ. ರಾಜ್ಯದಲ್ಲಿ ಸುಮಾರು ೫ ಹತ್ತಿ ಗಿರಣಿಗಳು ಮುಚ್ಚಿರುವ ಪ್ರಯುಕ್ತ ಸುಮಾರು ೧೦,೦೨೦ ಕಾರ್ಮಿಕರು ಯಾವುದೇ ರೀತಿಯ ಪರಿಹಾರವಿಲ್ಲದೆ ಹಸಿವಿನಿಂದ ಬಳಲುತ್ತಿದ್ದಾರೆ. ಅಲ್ಲದೇ ರಾಜ್ಯದಲ್ಲಿರುವ ೫ ಸಕ್ಕರೆ ಕಾರ್ಖಾನೆಗಳು ಮುಚ್ಚಿರುವ ಪ್ರಯುಕ್ತ ಸುಮಾರು ೫,೦೦೦ ಜನ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಮೇಲೆ ಕಾಣಿಸಿದ ಕಾರ್ಖಾನೆಗಳು ಸಹಕಾರಿ ಸಂಸ್ಥೆಗಳಿಂದ ಮತ್ತು ಖಾಸಗಿಯವರಿಂದ ನಡೆಯಲ್ಪಡುತ್ತಿರುವ ಕಾರ್ಖಾನೆಗಳು ಈ ಎಲ್ಲಾ ಕಾರ್ಖಾನೆಗಳನ್ನು ಜಾಗ್ರತೆಯಾಗಿ ಪುನರ್ ಪ್ರಾರಂಭಿಸುವುದಕ್ಕೆ ಸರ್ಕಾರ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ರೂಪಿಸದೆ ಕಾರ್ಮಿಕ ವಿರೋಧ ನೀತಿಯನ್ನು ಅನುಸರಿಸುತ್ತಿರುವುದು ಒಂದು ದುರ್ದೈವ ಸಂಗತಿ. ಈ ಸರ್ಕಾರ ಕಾಲವಿಳಂಬ ಮಾಡುತ್ತಿರುವುದು ವಿಷಾದಕರ.

ರಾಜ್ಯದಲ್ಲಿ ಮುಚ್ಚಿರುವ ಸಕ್ಕರೆ ಕಾರ್ಖಾನೆಗಳು.

೧. ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆ, ಗೌರಿಬಿದನೂರು, ೨ ವರ್ಷದಿಂದ ಮುಚ್ಚಿದೆ. ರೈತರಿಗೆ ಬಾಕಿ ಕೊಟ್ಟಿರುವುದಿಲ್ಲ. ಕಾರ್ಮಿಕರಿಗೆ ವೇತನವಿಲ್ಲ.

೨. ಮಹದೇಶ್ವರ ಸಕ್ಕರೆ ಕಾರ್ಖಾನೆ, ಕೊಳ್ಳೇಗಾಲ, ೨ ವರ್ಷದಿಂದ ಮುಚ್ಚಿದೆ. ರೈತರಿಗೆ ಬಾಕಿ ಕೊಟ್ಟಿರುವುದಿಲ್ಲ. ಕಾರ್ಮಿಕರಿಗೆ ವೇತನವಿಲ್ಲ.

೩. ಪಾಂಡವಿಲಾಸ ಸಕ್ಕರೆ ಕಾರ್ಖಾನೆ, ಹಿರಿಯೂರು ೩-೪-೮೫ ರಿಂದ ಮುಚ್ಚಿದೆ. ರೈತರಿಗೆ ಬಾಕಿ ಕೊಟ್ಟಿಲ್ಲ. ಕಾರ್ಮಿಕರಿಗೆ ವೇತನವಿಲ್ಲ.